ರೂಪಾಯಿ ಈ ರಾಜ್ಯದಲ್ಲಿ ಸಂಗ್ರಹ ಆಗಿದೆ. ಆ ಕಂಪನಿ ಗತಿ ಏನಾಗಿದೆ? ಹಿಂದೆ ಮಹಾರಾಷ್ಟ್ರ ಏಪೆಕ್ಸ್ ಬ್ಯಾಂಕ್ ಪಾಪರ್ ಎದ್ದಾಗ ಅವರು ಕೈ ಎತ್ತಿದಾಗ ನಾವು ಇದೇ ಸದನದಲ್ಲಿ ಚರ್ಚೆ ಮಾಡಿ ಏನಾದರೂ ಒಂದು ಬಿಲ್ ತನ್ನಿ ಈ ರೀತಿ ಕಂಪನಿಗಳು ಹುಟ್ಟುವುದು ಮುಚ್ಚುವುದು ಆಗಿ ಇನ್‌ವೆಸ್ಟ್‌ಮೆಂಟ್ ಮಾಡಿದವರಿಗೆ ರಕ್ಷಣೆ ಇಲ್ಲವೆಂದು ಹೇಳಿದ್ದೆವು. ಸರ್ಕಾರ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ಗುರು ಟೀಕ್ ಕಂಪನಿ ಏನಾಗಿದೆ? ಸರ್ಕಾರದ ಯಾವುದಾದರೂ ಇಲಾಖೆ ಹೋಗಿ ಅದರ ತಪಾಸಣೆ ಮಾಡಿ ಸಾರ್ವಜನಿಕರಿಗೆ ಹೇಳಬೇಕು. ಇಲ್ಲ, ಅದು ಚೆನ್ನಾಗಿದ್ದರೆ ಚೆನ್ನಾಗಿದೆ ಎಂದು ಹೇಳಿ; ಇಲ್ಲದಿದ್ದರೆ ಈ ರೀತಿ ಮಾಧ್ಯಮಗಳಲ್ಲಿ ಬಂದಾಗ ಜನ ಹಾಹಾಕಾರಕ್ಕೆ ಎದ್ದಿದ್ದಾರೆ. ಅಲ್ಲಿ ಫೀಲ್ಡ್ ಲೆವಲ್ ಆಫೀಸರ್ಸ್ ಜೀಪ್ ಸುಡುವುದು ಅಡ್ಡ ಹಾಕುವುದು ಲಾ–ಅಂಡ್ ಆರ್ಡರ್ ಸಿಚ್ಯುಯೇಷನ್ ಇಡೀ ರಾಜ್ಯದಲಿ ನಿರ್ಮಾಣವಾಗುತ್ತಿದೆ. ಗುರು ಟೀಕ್ ಕಂಪನಿ ಬಗ್ಗೆ ತಾವು ಏನಾದಾರೂ ಮಾಡುತ್ತೀರಾ? ಅಥವಾ ಏನಾದರೂ ವರದಿ ತರಿಸಿ ಈ ರಾಜ್ಯದ ಜನತೆಗೆ ಧೈರ್ಯ ತುಂಬುವ ಕೆಲಸ ಮಾಡುತ್ತೀರಾ? ಇನ್‌ವೆಸ್ಟ್‌ಮೆಂಟ್‌ಗಳನ್ನು ಮಾಡಿದವರಿಗೆ ರಕ್ಷಣೆ ಕೊಡುವ ಕೆಲಸವನ್ನು ಮಾಡಿ ಇಂತಹ ಬ್ಲೇಡ್ ಕಂಪನಿಗಳ ಬಗ್ಗೆ ಕಾನೂನು ತರುವ ಕೆಲಸ ಮಾಡುತ್ತೀರಾ. ಏನಾದರೂ ನಿಯಂತ್ರಣ ಮಾಡುವ ಕೆಲಸ ಮಾಡುತ್ತೀರಾ. ಈ ಕಂಪನಿ ಮಾಲೀಕರಿಗೆ ಪ್ರಶಸ್ತಿ ಕೂಡ ಕೊಟ್ಟಿದ್ದೀರಿ. ಇದು ಯಾವ ತರಹದ್ದು ಎಂದು ಹೇಳಬೇಕು. ದಯವಿಟ್ಟು ಇದರ ಬಗ್ಗೆ ಉತ್ತರ ನಿರೀಕ್ಷೆ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಗುರು ಟೀಕ್ ಕಂಪನಿ ಬಗ್ಗೆ ಮಾನ್ಯ ಅರಗ ಜ್ಞಾನೇಂದ್ರರವರು ಪ್ರಸ್ತಾಪ ಮಾಡಿದ್ದಾರೆ. ಪಾಲ್ ಎಂಬ ಐಪಿಎಸ್ ಆಫೀಸರ್‌ಗೆ ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಕೊಟ್ಟಿದ್ದೇವೆ. ಆ ರಿಪೋರ್ಟ್ ಬರುತ್ತಿದೆ. ಎರಡು ದಿವಸದ ಒಳಗೆ -on Monday or Tuesday, I will furnish the whole detail. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಅನೇಕ ಜನ ಇದ್ದಾರೆ. ನೀವು ದೊಡ್ಡ ಮನಸ್ಸು ಮಾಡಿ ಸೋಮವಾರ ವಿಷಯ ಪ್ರಸ್ತಾಪ ಮಾಡಿ.

ಶ್ರೀ ವಾಟಾಳ್ ನಾಗರಾಜ್: ಅಕ್ಷರ ದಾಸೋಹ ಅಡಿಗೆಯವರ ಬಗ್ಗೆ.

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರೇ ಹಿರಿಯ ಸದಸ್ಯರಿದ್ದೀರಿ, ಅನೇಕ ಜನ ಅಂತಹ ಪ್ರಶ್ನೆಗಳು ರೈಸ್ ಮಾಡುತ್ತಾರೆ.

(ಈ) ವಿಷಯ:– ಅಕ್ಷರ ದಾಸೋಹದ ಅಡಿಗೆ ಸಹಾಯಕರಿಗೆ ಸಂಬಳ ಭತ್ಯೆ ಜಾಸ್ತಿ ಮಾಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು, ಉಪ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಗಮನಕ್ಕೆ ತರುತ್ತಿದ್ದೇನೆ, ಈ ಅಕ್ಷರ ದಾಸೋಹದ ಅಡಿಗೆಯವರು ಸಹಾಯಕ್ಕೆ ಏನಿದ್ದಾರೆ ಅವರಿಗೆ ಕೊಡತಕ್ಕಂತಹ ಸಂಬಳ 300, 450, ಮತ್ತು 650 ರೂ. ಈ ಪ್ರಕಾರ ತಾವು ಕೊಡುತ್ತಿದ್ದೀರಿ. ಈ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಚಾಮರಾಜನಗರ ಜಿಲ್ಲೆ ಒಂದರಲ್ಲೇ 2,000 ಜನ ಇದ್ದಾರೆ, ಇಡೀ ಕರ್ನಾಟಕ ರಾಜ್ಯದಲ್ಲಿ 50,000 ಕ್ಕೂ ಮೇಲ್ಪಟ್ಟು ಅಡಿಗೆಯವರು ಮಹಿಳೆಯರು ಬೆಂಕಿ ಮುಂದೆ ಕೂತು, ಒಲೆ ಮುಂದೆ ಕೂತು ಬಹಳ ತೊಂದರೆ

ಪಡತಕ್ಕಂತಹ ವ್ಯವಸ್ಥೆಯಲ್ಲಿ ಇದ್ದಾರೆ. ಅಕ್ಷರ ದಾಸೋಹ ಅಡಿಕಗೆ ಮಾಡತಕ್ಕಂತಹ ಹೆಣ್ಣು ಮಕ್ಕಳಿಗೆ ಸಹಾಯಕಿಯರಿಗೆ, ಈ ಮಧ್ಯಾಹ್ನದ ಬಿಸಿ ಊಟ ತಾವು ಏನು ಕೊಡುತ್ತಿದ್ದೀರಿ ಆ ಊಟ ತಯಾರು ಮಾಡತಕ್ಕಂತಹ ಹೆಣ್ಣು ಮಕ್ಕಳು ಅವರಿಗೆ ಸರಿಯಾದ ಭದ್ರಗೆ ಇಲ್ಲ. ಜೊತೆಗೆ ಅವರಿಗೆ ಕೊಡತಕ್ಕಂತಹ ವೇತನ 300, 450, ಮತ್ತು 650 ರೂ. ಏನು ಕೊಡುತ್ತಿದ್ದಾರೆ, ಅದನ್ನು ಕನಿಷ್ಠ ಜಾಸ್ತಿ ಮಾಡಿ ಅವರಿಗೆ ಭದ್ರತೆ ಮಾಡತಕ್ಕಂತಹ ವ್ಯವಸ್ಥೆ ಇರಬೇಕು. ಇಲ್ಲದಿದ್ದರೆ ಅವರೆಲ್ಲರೂ ಸಂಪೂರ್ಣವಾಗಿ ತಯಾರು ಮಾಡುವ ಮಧ್ಯಾಹ್ನದ ಬಿಸಿ ಊಟ ಅತ್ಯಂತ ಆದರ್ಶವಾದಂಥ ಮಧ್ಯಾಹ್ನದ ಬಿಸಿ ಊಟ ಇದಕ್ಕೆ ಅವರದ್ದೇ ಮತ್ತು ಹೆಚ್ಚಿನ ಗೌರವ ಮತ್ತು ಶಕ್ತಿ ಆದ್ದರಿಂದ ನಾನು ತಮಗೆ ಹೇಳುತ್ತೇನೆ, ಇವರಿಗೆ ಸಂಬಳ ಭತ್ಯೆ ಜಾಸ್ತಿ ಮಾಡಬೇಕು. ಇದಕ್ಕೆ ಸರ್ಕಾರದ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಶಿಕ್ಷಣ ಸಚಿವರು ಇಲ್ಲ, ಅವರು ಏನು ಸಲಹೆ ಮಾಡಿದ್ದಾರೆ, ಈಗ ಕೊಟ್ಟಿರತಕ್ಕಂಥದ್ದು ಹೆಚ್ಚು ಕೊಡಬೇಕೆಂದು ಹೇಳಿದ್ದಾರೆ, ಅದನ್ನು ಪರಿಶೀಲನೆ ಮಾಡಿ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ಇಲ್ಲಿ ನನ್ನ ಸಮಸ್ಯೆ ಬಗೆಹರಿದಿಲ್ಲ.

ಅಧ್ಯಕ್ಷರು: ನೀವು ಏನು ಚರ್ಚೆ ಮಾಡುತ್ತೀರಿ ಎಂದು ನನಗೆ ಮೊದಲೇ ನೋಟೀಸ್ ಕೊಡುವುದಿಲ್ಲ. ಸರ್ಕಾರಕ್ಕಾದರೂ ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ನೀವು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಬಹುದು. ಅಡಿಗೆಯವರ ಪರಿಸ್ಥಿತಿ ಬಹಳ ಶೋಚನೀಯ ಪರಿಸ್ಥಿತಿ ಇದೆ.

ಅಧ್ಯಕ್ಷರು: ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇವೆಂದು ಹೇಳಿದ್ದಾರೆ. ಇನ್ನೊಂದು ದಿವಸ ರೈಸ್ ಮಾಡಿ ಸಮರ್ಪಕವಾದ ಉತ್ತರ ಸಿಗುತ್ತದೆ. ಸಂಬಂಧಪಟ್ಟ ಸಚಿವರು ಇಲ್ಲ.

(ಉ) ವಿಷಯ: ಬೆಂಕಿ ಬಿದ್ದು ಬೆಳೆ ನಾಶವಾಗಿರುವ ರಾಗಿ ಬೆಳೆಗಾರರಿಗೆ ಪರಿಹಾರ ವಿತರಿಸುವ ಕುರಿತು.

ಶ್ರೀ ಹೆಚ್. ಆಂಜನೇಯ(ಭರಮಸಾಗರ): ಮಾನ್ಯ ಅಧ್ಯಕ್ಷರೆ, ಬೇಸಿಗೆಯಲ್ಲಿ ನಮ್ಮ ಕಡೆ ಬಹಳ ಸುಡುವ ಬಿಸಿಲು ಇರುತ್ತದೆ. ಬಿಸಿಲಿಗೆ ರಾಗಿ ಬಣವೆಗಳಿಗೆ ಬೆಂಕಿ ಬಿದ್ದಿದೆ. ನಮ್ಮ ರೈತರು ಮನೆಯ ಹಿಂಭಾಗದಲ್ಲಿ ಕಣಗಳಲ್ಲಿ ರಾಗಿ ಬಣವೆಗಳನ್ನು ಇಟ್ಟುಕೊಂಡಿರುತ್ತಾರೆ. ತೆನೆ ಇರತಕ್ಕಂತಹ ಬಣವೆಗಳಿಗೆ ನನ್ನ ಕ್ಷೇತ್ರದಲ್ಲಿ ಸುಮಾರು ಆರು ಊರುಗಳಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ರೈತರು ಕಂಗಾಲಾಗಿದ್ದಾರೆ. ಅವರಿಗೆ ತಿನ್ನುವುದಕ್ಕೆ ರಾಗಿ ಇಲ್ಲ, ಅವರ ದನಕರುಗಳಿಗೆ ಮೇವು ಕೂಡ ಇಲ್ಲ. ಇವೆಲ್ಲವೂ ನಾಶ ಆಗಿವೆ. ತಹಶೀಲ್ದಾರ್‌ಗೆ ಅರ್ಜಿ ಕೊಟ್ಟರೆ ತಹಶೀಲ್ದಾರ್‌ರವರು ಏನು ನಿಮ್ಮ ತೆನೆ ನಾಶವಾಗಿದೆ, ಹುಲ್ಲು ನಾಶವಾಗಿದೆ ಅದಕ್ಕೆ ಪರಿಹಾರ ಕೊಡುವುದಕ್ಕೆ ಯಾವುದೇ ರೀತಿಯ ಕಾನೂನು ಇಲ್ಲವೆಂದು ಹೇಳುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ಈ ರೀತಿಯ ಕಾನೂನಿನಲ್ಲಿ ಅವಕಾಶ ಇಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ದಯಮಾಡಿ ತಾವು ಹಣಕಾಸಿನ ಮಂತ್ರಿಗಳಿದ್ದೀರಿ, ಮುಖ್ಯಮಂತ್ರಿಗಳೂ ಇದ್ದಾರೆ, ಇದು ತುಂಬ ಗಂಭೀರವಾದ ಪ್ರಶ್ನೆ. ದಯವಿಟ್ಟು ಈ ಬೆಂಕಿಯಿಂದ ಅನಾಹುತಗೊಳಗಾಗಿರತಕ್ಕಂತಹ ಬಡ ರೈತರಿಗೆ ಬಣವೆ ಸುಟ್ಟುಕೊಂಡಿರುವವರಿಗೆ ಪರಿಹಾರ ನೀಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಹಣಕಾಸಿನ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.